

ಅದೇ ಸಮಯಕ್ಕೆ ಯಾವುದೋ ಟಿವಿ ಚಾನೆಲ್‌ನವರು ಮೈಕ್ ತೆಗೆದುಕೊಂಡು ಬಂದು ಸುಬ್ಬಮ್ಮನ ಬಾಯಿಗೆ ಹಿಡಿದು, 'ಮಗನ ಸಾವಿಗೆ ನಿಮ್ಮ ಪ್ರತಿಕ್ರಿಯೆ ಏನು?' ಎಂದು ಕೇಳಿದ ತಕ್ಷಣ ಅವಳ ಆಕ್ರೋಶ ಅವನ ಮೇಲೆ ಹರಿಯಿತು. ಅದೇ ಮೈಕನ್ನು ಕಸಿದು ಕೊಂಡು ಅವನ ತಲೆಗೆ ಹೊಡೆದಳು. ಆ ವರದಿಗಾರನ ತಲೆಯಿಂದ ರಕ್ತ ಒಸರತೊಡಗಿತು. ಇದು ಲೈವ್ ಆಗಿ ಟಿವಿಯಲ್ಲಿ ಪ್ರಸಾರವಾಗತೊಡಗಿತು. ಅಷ್ಟರಲ್ಲಿ ಯಾರೋ ಬಂದು ಸುಬ್ಬಮ್ಮನ್ನು ಹಿಡಿದುಕೊಂಡು ಅಲ್ಲೇ ಕೂರಿಸಿ ನೀರು ಕುಡಿಸಿದರು. ಅಲ್ಲಿ ನೆರೆದಿದ್ದವರೆಲ್ಲಾ ಬಾಬಣ್ಣನಿಗೆ ಜೈಕಾರ ಹಾಕತೊಡಗಿದರು. ಅವಳ ಆಕ್ರೋಶ ಈಗ ಸ್ವಲ್ಪ ಕಡಿಮೆಯಾಗತೊಡಗಿತು. ಸುಬ್ಬಮ್ಮನಿಗೆ ನೆರೆದಿದ್ದ ಜನರ ಜೈಕಾರ ಕೇಳುವಾಗಲೆಲ್ಲಾ ತಾನು ಹೆತ್ತಮಗ ತನಗೆ ಎಂತಹ ಕೀರ್ತಿ ತಂದ ಎಂದು ಒಂದು ಕ್ಷಣ ಹೆಮ್ಮೆಯಾದರೂ ಮರುಕ್ಷಣವೇ 'ನನಗೆ ಈ ಕೀರ್ತಿ ಬೇಡ, ಹೆಸರು ಹಣ ಏನೂ ಬೇಡ, ಮಗ ಬದುಕಿ ಬಂದು ಕಣ್ಣೆದುರು ಇದ್ದರೆ ಸಾಕು, ಬೇರೇನೂ ಬೇಡ' ಎಂದು ಗೋಳಾಡತೊಡಗಿದಳು. 'ಗೌಡ್ರೇ, ಹೇಗಾದ್ರೂ ಮಾಡಿ ನನ್ನ ಮಗನನ್ನು ಬದುಕಿಸಿಕೊಡಿ, ಅವನು ಇಲ್ಲದಿದ್ದರೆ ನಾನು ಉಳಿಯೋಲ್ಲ' ಎಂದು ಹೇಳುತ್ತಾ ರಾಮೇಗೌಡರ ಕಾಲನ್ನು ಹಿಡಿಯಲು ಹೋದಳು. ಆದರೆ, ಹೆದರಿಕೊಂಡಂತೆ ಕಂಡುಬಂದ ರಾಮೇಗೌಡರು ನಿಧಾನವಾಗಿ ಜಾಗ ಖಾಲಿ ಮಾಡಿದರು.

ಯೋಧ ಬಾಬಣ್ಣನ ಅಂತ್ಯಕ್ರಿಯೆಯ ವಿಧಿ ವಿಧಾನಗಳು ಶುರುವಾದವು. ಭಾರತದ ಬಾವುಟವನ್ನು ಬಾಬಣ್ಣನ ಹೆಣಕ್ಕೆ ಹೊದಿಸಿದರು. ನಂತರ ಪೊಲೀಸರು ಗಾಳಿಯಲ್ಲಿ ಗುಂಡು ಹಾರಿಸಿ, ಸರ್ಕಾರಿ ಗೌರವಗಳೊಂದಿಗೆ ಅವನ ಅಂತ್ಯಕ್ರಿಯೆ ನೆರವೇರಿತು. ಸುಬ್ಬಮ್ಮ ಇದನ್ನೆಲ್ಲಾ ನೋಡುತ್ತಿದ್ದರೂ ಮೈಮೇಲೆ ಪ್ರಜ್ಞೆ ಇಲ್ಲದವಳಂತಾಗಿದ್ದಳು.

ಮಗನನ್ನು ಗುಂಡಿಯಲ್ಲಿ ಮುಚ್ಚಿದ ನಂತರ ಎಲ್ಲರೂ ಹೊರಟುಹೋದ ಮೇಲೆ ಮನೆಗೆ ಸುಬ್ಬಮ್ಮಳನ್ನು ತಂದು ಮಲಗಿಸಿದರು. ಅವಳಿಗೆ ಈಗ ಹಗಲು- ರಾತ್ರಿಯ ಪರಿವೆಯೇ ಇರಲಿಲ್ಲ. ಕುಸುಮಾ ಆಗಾಗ್ಗೆ ಬಂದು ಊಟ ತಿನ್ನಿಸಿ ಹೋಗುತ್ತಿದ್ದಳು. ಎಚ್ಚರವಾದಾಗ ಒಮ್ಮೊಮ್ಮೆ ಅಳುತ್ತಿದ್ದಳು. ಒಮ್ಮೊಮ್ಮೆ ಮಗನ ಸಮಾಧಿಯ ಹತ್ತಿರ ಹೋಗಿ ಏನೇನೋ ಮಗನೊಂದಿಗೆ ಹೇಳುವುದೂ, ಮಾತನಾಡುವುದೂ, ನಗುವುದೂ ನಡೆದಿತ್ತು.

ಒಂಬತ್ತನೆಯ ದಿನ ಹುತಾತ್ಮನಾದ ಬಾಬಣ್ಣನ ಹೆಸರಿನಲ್ಲಿ ಊರಿನಲ್ಲಿ ಅನ್ನ ಸಂತರ್ಪಣೆ ಏರ್ಪಾಡಾಗಿತ್ತು. ಊರಿನವರೆಲ್ಲಾ ಸೇರಿ ಈ ಕಾರ್ಯವನ್ನು ಹಮ್ಮಿಕೊಂಡಿದ್ದರು. ಬಾಬಣ್ಣನಿಗೆ ಇಷ್ಟವಾದ ಕಾಯಿಒಬ್ಬಟ್ಟು ಮತ್ತು ಸಕಲ ತಿಂಡಿಗಳನ್ನು ಮಾಡಲಾಗಿತ್ತು. ಕುಸುಮಾ, ಸುಬ್ಬಮ್ಮಳನ್ನು ಕೂರಿಸಿ, ಎಲೆ ಹಾಕಿ ಊಟ ಬಡಿಸತೊಡಗಿದಳು. ತಿಥಿಗೆ ಮಾಡಿದ್ದ ಪಲ್ಯಗಳು, ಅನ್ನ, ಸಾರು, ಪಾಯಸ, ಸಂಡಿಗೆ, ವಡೆ, ಕಾಯಿಒಬ್ಬಟ್ಟು ಎಲ್ಲವನ್ನೂ ಬಡಿಸಿದಳು. ಕುಸುಮಾ ಕಾಯಿಒಬ್ಬಟ್ಟನ್ನು ಸುಬ್ಬಮ್ಮಳ ಬಾಯಿಗೆ ಇಟ್ಟ ತಕ್ಷಣ ಒಂದು ವಾರದಿಂದ ಏನೊಂದೂ ಮಾತನಾಡದೆ ಮೂಕಿಯಾಗಿದ್ದ ಸುಬ್ಬಮ್ಮಳು ತಕ್ಷಣ, 'ಅಯ್ಯೋ ಮಗನೇ ಬಾಬಣ್ಣ, ನನ್ನ ಕಂದಾ, ನಿಂಗಿಷ್ಟವಾದ ಕಾಯೊಬ್ಬಟ್ಟು ಮಾಡಿದ್ದಾರೆ ಕಣಪ್ಪ. ಸ್ವಲ್ಪನಾದ್ರೂ ತಿಂದ್ಹೋಗು, ಹಂಗೆ ಹೋಗ್ಬೇಡ. ಅಯ್ಯೋ ನಾನು ಹೇಳ್ತಾನೇ ಇದ್ದೀನಿ, ಕೇಳಿಸ್ಕೋತ್ತಾನೆ ಇಲ್ಲಾ, ನನ್ನ ಕಂದ ಓಡ್ತಾ ಇದ್ದಾನೆ. ಯಾರಾದ್ರು ನಿಲ್ಸಿ. ನನ್ನ ಪುಟಾಣಿ ಬಾಬಣ್ಣ ಓಡ್ತಾ ಇದ್ದಾನೆ. ಒಂದೇ ಒಂದು ತುತ್ತು ತಿಂದುಹೋಗು...' ಎಂದು ಹೇಳುತ್ತಾ ಕಾಯೊಬ್ಬಟ್ಟನ್ನು ಎರಡು ಕೈಯಲ್ಲಿ ಹಿಡಿದುಕೊಂಡು ಬಾಬಣ್ಣನ ಗುಂಡಿಯ ಕಡೆ ಓಡತೊಡಗಿದಳು. ಅವಳನ್ನು ಹಿಡಿಯಲು ಹಿಂದೆ ಕುಸುಮಾ ಮತ್ತು ಇವಳ ಹಿಂದೆ ಊರಿನ ಜನ ಓಡತೊಡಗಿದರು. ●